## 30. ಕೃಷಿಕರಿಗೆ ಬಂಪರ್

ಕೃಷಿ ಉತ್ಪನ್ನಗಳು ಮತ್ತು ಕೊಯ್ಲೋತ್ತರ ಸಂಗ್ರಹಾಗಾರಗಳ (ಫಾರಂಗೇಟ್) ಮೂಲ ಸೌಕರ್ಯ ವೃದ್ಧಿಗಾಗಿ ನಬಾರ್ಡ್ ಮೂಲಕ ರೂ.1 ಲಕ್ಷ ಕೋಟಿ ನೆರವನ್ನು ಶೀಘ್ರ ಕಲ್ಪಿಸಲಾಗುವುದೆಂದು ವಿತ್ತ ಸಚಿವೆ ತಿಳಿಸಿದರು.

**ಆಹಾರ ಸಂಸ್ಕರಣೆಗೆ ನೆರವು:–** ಕೃಷಿ ಉತ್ಪನ್ನಗಳನ್ನು ಆಧರಿಸಿದ ಕಿರು ಆಹಾರ ಸಂಸ್ಕರಣಾ ಘಟಕಗಳನ್ನು ಕ್ಲಸ್ಟರ್ ಮಾದರಿಯಲ್ಲಿ ಅಭಿವೃದ್ದಿ ಪಡಿಸಲು ರೂ.10 ಸಾವಿರ ಕೋಟಿಯ ನೆರವು. ಇದು ಪ್ರಧಾನಿಯವರು ಹೇಳಿದ ಲೋಕಲ್ ವೋಕಲ್‌ಗೆ ಪೂರಕವಾದ ಕಾರ್ಯಕ್ರಮ. ಇದರಿಂದ ಸ್ಥಳೀಯವಾಗಿ ತಯಾರಾದ ಉತ್ಪನ್ನವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಅನುಕೂಲವಾಗುತ್ತದೆ.

**ಕೃಷಿ ಉತ್ಪನ್ನ ಸಾಗಣೆ ಸಾಮರ್ಥ್ಯ ವೃದ್ಧಿ:–** ಬಜೆಟ್‌ನಲ್ಲಿ ಈಗಾಗಲೇ ಘೋಷಿಸಿರುವ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಗೆ ರೂ.20 ಸಾವಿರ ಕೋಟಿ ನೀಡಲಾಗಿದ್ದು, ಸಮಗ್ರ ಸುಸ್ಥಿರ ಸಮುದ್ರ ಮತ್ತು ಒಳನಾಡು ಮೀನುಗಾರಿಕೆಗೆ ರೂ.11 ಸಾವಿರ ಕೋಟಿ ಮತ್ತು ಮೀನುಗಾರಿಕೆಯ ಮೂಲ ಸೌಕರ್ಯ ಮಾರುಕಟ್ಟೆ ಮೂಲ ಸೌಕರ್ಯ ವೃದ್ದಿಗೆ ರೂ.9 ಸಾವಿರ ಕೋಟಿ ವಿನಿಯೋಗ ಆಗಲಿದೆ. ಮತ್ಸ್ಯ ಸಂಪದ ಯೋಜನೆಗೆ ಶೀಘ್ರ ಚಾಲನೆ ದೊರೆಯಲಿದ್ದು, ಇದರಿಂದ ಹೆಚ್ಚುವರಿಯಾಗಿ 17 ಲಕ್ಷ ಟನ್ ಮೀನು ಉತ್ಪಾದನೆ ಹೆಚ್ಚಳವಾಗಲಿದೆ. ಮೀನುಗಾರಿಕೆ ಕ್ಷೇತ್ರದಲ್ಲಿ ಭಾರತದ ರಫ್ತು ಪ್ರಮಾಣ ದ್ವಿಗುಣಗೊಂಡು ರೂ.1 ಕೋಟಿಯಷ್ಟು ಅಧಿಕವಾಗಲಿದೆ. ಅನುದಾನವನ್ನು ಪ್ರಯೋಗಾಲಯ, ಮೀನುಗಾರರ ಬೋಟ್ ಖರೀದಿ, ಮೀನುಗಾರಿಕೆಯ ಬಂದರು ನಿರ್ಮಾಣ, ಬಲೆ ಹೆಣೆಯುವಿಕೆ, ಕಡಲಸಸ್ಯದ ಕೃಷಿ, ಆಲಂಕಾರಿಕ ಮೀನುಗಳ ಸಾಗಣೆ, ಬೋಟ್ ಮತ್ತು ಮೀನುಗಾರರಿಗೆ ವಿಮೆ, ಮೀನುಗಾರಿಕೆ ರಜಾ ಅವಧಿಯ ನೀಡುವ ಸಹಾಯಧನಕ್ಕೆ ಬಳಸಿಕೊಳ್ಳಬಹುದು.

**ಡೇರಿ ಮೂಲ ಸೌಕರ್ಯಕ್ಕೆ ನೆರವು:–**ಡೇರಿ ಉದ್ಯಮದ ಮೂಲ ಸೌಕರ್ಯ ಹೆಚ್ಚಳಕ್ಕೆ ರೂ.15 ಸಾವಿರ ಕೋಟಿಯನ್ನು ತೆಗೆದಿರಿಸಲಾಗಿದೆ. ಘಟಕ ಸ್ಥಾಪನೆ ಬಳಕೆ ಮಾಡಬಹುದು. ಖಾಸಗಿಯವರೂ ಹೂಡಿಕೆ ಮಾಡಿದರೆ ಪ್ರೋತ್ಸಾಹ ನೀಡಲಾಗುವುದು.

**ಔಷಧೀಯ ಸಸ್ಯ ಬೆಳೆಯಲು ಸಹಾಯಕ:–** ದೇಶದಲ್ಲಿ ಔಷಧೀಯ ಸಸ್ಯವನ್ನು 2.25 ಲಕ್ಷ ಹೆಕ್ಟೇರ್‌ನಲ್ಲಿ ಹಾಲಿ ಬೆಳೆಯಲಾಗುತ್ತಿದೆ. ಮುಂದಿನ ಎರಡು ವರ್ಷದಲ್ಲಿ ಇದನ್ನು 10 ಲಕ್ಷ ಹೆಕ್ಟೇರ್‌ಗೆ ವಿಸ್ತರಿಸುವ ಉದ್ದೇಶ ಇದೆ. ಇದಕ್ಕಾಗಿ ರೂ.4 ಸಾವಿರ ಕೋಟಿ ನೀಡಲಾಗಿದೆ. ಗಂಗಾ ನದಿ ದಡದಲ್ಲಿ 800 ಹೆಕ್ಟೇರ್ ಪ್ರದೇಶವನ್ನು ಔಷಧೀಯ ವನ ಕಾರಿಡಾರ್ ಎಂದು ಗುರುತಿಸಲಾಗಿದೆ.

**ಜೇನು ಸಾಕಣೆಗೆ ಪ್ರೋತ್ಸಾಹ:–** ಜೇನುನೊಣ ಸಾಕಣೆ ಮಾಡುವವರಿಗೆ ರೂ.500 ಕೋಟಿ ನೆರವನ್ನು ಘೋಷಿಸಲಾಗಿದೆ. ಸಮಗ್ರ ಜೇನುನೊಣ ಅಭಿವೃದ್ದಿ ಕೇಂದ್ರ ಸ್ಥಾಪನೆ. ಜೇನು ಸಂಗ್ರಹ, ಮಾರುಕಟ್ಟೆ, ದಾಸ್ತಾನು ಕೇಂದ್ರ ಮೌಲ್ಯವರ್ಧನೆ, ಜೇನು ತಳಿ ಅಭಿವೃದ್ಧಿ, ಮೇಣ ರಫ್ತಿಗೂ ಅನುಕೂಲ ಆಗಲಿದೆ.

**ಆಪರೇಷನ್ ಗ್ರೀನ್:–**ಅಲ್ಪ ಸಮಯದಲ್ಲೇ ಹಾಳಾಗುವಂತಹ ತರಕಾರಿ ಮತ್ತು ಹಣ್ಣುಗಳ ಸಾಗಣಿಕೆಗೆ ರೂಪಿಸಲಾದ ಆಪರೇಷನ್ ಗ್ರೀನ್ ಯೋಜನೆಗೆ ಟೊಮ್ಯಾಟೊ, ಈರುಳ್ಳಿ, ಆಲೂಗಡ್ಡೆ (ಟಾಪ್ ಆ್ಯಂಡ್ ಟೋಟಲ್) ಸೇರ್ಪಡೆ, ಸರಬರಾಜಿನ ಬಾಬ್ತಿನಲ್ಲಿ ಸಾಗಾಣಿಕೆಗೆ ಶೇ.50ರಷ್ಟು ಸಬ್ಸಿಡಿ ಮತ್ತು ಶೈತ್ಯಾಗಾರದಲ್ಲಿ ದಾಸ್ತಾನಿಗೆ ಶೇ.50 ರಷ್ಟು ರಿಯಾಯಿತಿಯನ್ನು ಘೋಷಿಸಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:16.05.2020